23, (116) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬಸವಕಲ್ಯಾಣ ಪುರಸಭೆಯ ವ್ಯಾಪ್ತಿಗೆ ಬರುವ ಒಟ್ಟು ಆಸ್ತಿಪಾಸ್ತಿಗಳ ವಿವರಗಳೇನು ಹಾಗೂ ಇದರ ಮಾರುಕಟ್ಟೆ ಬೆಲೆ ಎಷ್ಟು ;

ಆ) ಪುರಸಭೆಗೆ ಸೇರಿದ ಆಸ್ತಿ ಪಾಸ್ತಿಗಳನ್ನು ಲೀಸ್/ಬಾಡಿಗೆ ಆಧಾರದ ಮೇಲೆ ನೀಡಲಾಗಿರುವುದು ನಿಜವೇ ; ಹಾಗಿದ್ದಲ್ಲಿ, ಇವುಗಳನ್ನು ಯಾರು ಯಾರಿಗೆ ಮತ್ತು ಎಷ್ಟೆಷ್ಟು ಅವಧಿಗೆ ಲೀಸ್ ಹಾಗೂ ಬಾಡಿಗೆಗೆ ನೀಡಲಾಗಿದೆ ;

ಇ) ಅವಧಿ ಮುಕ್ತಯವಾಗಿದ್ದರೂ ಸಹ ಲೀಸ್ ಮತ್ತು ಬಾಡಿಗೆ ಆಧಾರದ ಮೇಲೆ ವಾಸ ಮಾಡುತ್ತಿರುವವರುಗಳನ್ನು ತೆರವುಗೊಳಿಸಲಾಗಿದೆಯೇ ;

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ;

ಉ) ಇಂತಹ ಪ್ರಕರಣಗಳಲ್ಲಿ ಪುರಸಭೆಯ ಅಧಿಕಾರಿಗಳು ಶಾಮೀಲಾಗಿರುವುದು ನಿಜವೇ ;

ಊ) ಲೀಸ್ ಮತ್ತು ಬಾಡಿಗೆ ಅವಧಿ ಮುಗಿದಿದ್ದರೂ ಸಹ ತೆರವು ಗೊಳಿಸದೇ ಇರುವವರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು ತೆರವು ಗೊಳಿಸಲಾಗುವುದೇ ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) –

ಅ) ಬಸವಕಲ್ಯಾಣ ಪುರಸಭಾ ವ್ಯಾಪ್ತಿಯಲ್ಲಿ ಒಟ್ಟು 66 ಆಸ್ತಿಗಳು ಪುರಸಭೆಗೆ ಸೇರಿರುತ್ತವೆ.

ಕ್ರ. ಸಂ.	ಪುರಸಭೆ ಆಸ್ತಿಪಾಸ್ತಿಗಳು	ಅಂದಾಜು ಮಾರುಕಟ್ಟೆ ಬೆಲೆ ರೂ.
1	ಪುರಸಭೆ ಕಟ್ಟಡ, ಮುನಿಸಿಪಲ್ ಕ್ವಾಟರ್ಸ್, ಪಂಪ್‌ಹೌಸ್, ಶೌಚಾಲಯ, ಶಾಲೆ ಇತ್ಯಾದಿ (26)	53,31,500
2	ಉದ್ಯಾನವನ (6)	10,35,045
3	ನಾಗರೀಕ ಸೌಲಭ್ಯಕ್ಕಾಗಿ ನಿವೇಶನ (6)	04,62,960
4	ನಿವೇಶನಗಳು (28)	10,70,000
	ಒಟ್ಟು	78,99,505

ಆ) ಹೌದು, ವಿವರಗಳನ್ನು ಅನುಬಂಧ–ಅರಲ್ಲಿ ಲಗತ್ತಿಸಿದೆ.

ಇ) ಇಲ್ಲ.

ಈ) ಒಟ್ಟು 28 ನಿವೇಶನಗಳನ್ನು ಬಾಡಿಗೆಗೆ ನೀಡಲಾಗಿದ್ದು, ಸದರಿ ನಿವೇಶನಗಳಲ್ಲಿ ಪುರಸಭಾ ವತಿಯಿಂದ ಅಂಗಡಿಗಳನ್ನು ನಿರ್ಮಿಸಿರುವುದಿಲ್ಲ. ಅಂಗಡಿಗಳನ್ನು ಕಟ್ಟಲು ಪುರಸಭೆಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಂಗಡಿ ಮಳಿಗೆಗಳನ್ನು ಕಟ್ಟುವ ಉದ್ದೇಶ ಸದ್ಯದಲ್ಲಿ ಇರುವುದಿಲ್ಲವಾದ್ದರಿಂದ ಪುರಸಭೆಗೆ ಬರುವ ಆದಾಯದ ಪ್ರಮಾಣ ಕಡಿಮೆ ಇರುವ ಪ್ರಯುಕ್ತ ಲೀಜ್/ಬಾಡಿಗೆ ಆಧಾರದ ಮೇಲೆ ಈ ಹಿಂದೆ ಇದ್ದ ಬಾಡಿಗೆದಾರರನ್ನು ತೆರವುಗೊಳಿಸಲು ಕ್ರಮ ಜರುಗಿಸಿರುವುದಿಲ್ಲ.

ಉ) ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಹೌದು.

ಅನುಬಂಧ

ಬಸವಕಲ್ಯಾಣ ಪುರಸಭೆಯ ವ್ಯಾಪ್ತಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಲೀಸ್/ಬಾಡಿಗೆ ಆಧಾರದ ಮೇಲೆ ನೀಡಿರುವುದಕ್ಕೆ ಸಂಬಂಧಪಟ್ಟ ವಿವರಗಳು

ಕ್ರ. ಸಂ.	ಪುರಸಭೆ ಆಸ್ತಿ ನಿವೇಶನ / ಅಂಗಡಿ	ಬಾಡಿಗೆ ಮೇಲೆ ಪಡೆದವರ ಹೆಸರು	ನಿವೇಶನ ಸಂಖ್ಯೆ	ಅಳತೆ	ಬಾಡಿಗೆ ಆಧಾರದ ಮೇಲೆ ಕೊಟ್ಟಿರುವ ವರ್ಷ	ಎಷ್ಟು ಅವಧಿಗಾಗಿ ನೀಡಲಾಗಿದೆ	ನಿಗದಿ ಪಡಿಸಿದ ಬಾಡಿಗೆ (ಮಾಸಿಕ)	ನಿಗದಿ ಪಡಿಸಿದ ವರ್ಷಕ್ಕೆ ಬಾಡಿಗೆ	ಇದುವರೆಗೆ ವಸೂಲಾದ ಬಾಡಿಗೆ	ಇನ್ನೂ ವಸೂಲಿಯಾಗ ಬೇಕಾದ ಬಾಡಿಗೆ
1	ನಿವೇಶನ	ಅನ್ವರಮಿಯಾ ಮುಕ್ತಾಫಾ	6–67		1985	11 ತಿಂಗಳು	100	1200	24300	300
2		ಅಕ್ಬರ ಜಾಫರಸಾಬ್	2		1985	11 ತಿಂಗಳು	100	1200	18600	5900
		ಲಕ್ಷ್ಮಣ ಗುಂಡಾಜಿ	6		1985	11 ತಿಂಗಳು	100	1200	18000	6500
		ಯುಸುಫ ಇಬ್ರಾಹಿಂ ಸಾಬ	94		1985	11 ತಿಂಗಳು	5	60	960	270
		ಶೇಖ್ ಉಮರ ಮಸ್ತಾನ ಸಾಬ್	87		1985	11 ತಿಂಗಳು	20	120	3600	1320
		ಕವಿಮಾ ಶೆಕಪ್ಪಾ	19		1985	11 ತಿಂಗಳು	100	1200	16900	6200

		ಯಸುಫಮಿಯಾ ನಬೀಸಾಬ	16		1985	11 ತಿಂಗಳು	150	1800	20100	16800
		ಮಿರ್ಜಾ ಇಸ್ಮಾಯಿಲ್ ಖಾಸಿಂ ಸಾಬ	4		1985	11 ತಿಂಗಳು	6	7000	1164	240
		ಲಾಡಲೆ ಸಾಬ ರಿಯಾಜ್	7		1985	11 ತಿಂಗಳು	150	1800	29250	9900
		ಉತ್ತಮಗೀರ ಶಾರದಾಗೀರ	89		1985	11 ತಿಂಗಳು	30	360	5490	1530
		ಚಂದ್ರಬಾನ ತುಕಾರಾಮ	91		1985	11 ತಿಂಗಳು	20	240	3900	540
		ಡೋಂಗರಸಿಂಗ ಜಾನಂಸಿಂಗ್	93		1985	11 ತಿಂಗಳು	20	240	3120	1560
		ರಿಯಾಜೋದ್ದಿನ ಜಹಿರೊದ್ದಿನ	108		1985	11 ತಿಂಗಳು	20	240	4140	780
		ಅಮೀರುದ್ದೀನ ಹನಿಫಸಾಬ	85		1985	11 ತಿಂಗಳು	20	240	4140	780
		ಅಬ್ದುಲ್ ಜಬ್ಬಾರ ಖಾದರ ಹುಸೇನ	92		1985	11 ತಿಂಗಳು	20	240	3600	1320

		ಪ್ರೆಸಿಡೆಂಟ್ ಅಲ್‌ಹುದಾ ಸೊಸೈಟಿ	23		1985	11 ತಿಂಗಳು	150	1800	30600	4500
		ಅಬ್ದುಲ್ ರೌಫ ಮೊ.ಸಾಬ	142		1985	11 ತಿಂಗಳು	50	600	14550	150
		ಮೊ. ಅಥರ ಮಸಿರುದ್ದೀನ	8		1985	11 ತಿಂಗಳು	100	1200	17300	4800
		ಶೇಖ್ ಅಹ್ಮದ್ ಗೌಸೊದ್ದಿನ	3		1985	11 ತಿಂಗಳು	5	60	840	330
		ರಮೇಶ್ ಝರೆಪ್ಪಾ	81		1985	11 ತಿಂಗಳು	25	300	4850	395
		ಅಬ್ದುಲ್ ರೌಫ ಅಬ್ದುಲ ಅಜೀಜ	15		1985	11 ತಿಂಗಳು	100	1200	20400	2900
		ಕಾಶೆಪ್ಪಾ ನರಸಪ್ಪಾ	7		1985	11 ತಿಂಗಳು	50	600	10650	1100
		ಬಿಮಿಲ್ಲಾಸಾಬ ಮಸ್ತಾನಸಾಬ	1		1985	11 ತಿಂಗಳು	120	1440	18720	9360
		ಇಸ್ಮಾಯಿಲ್ ಇಬ್ರಾಹಿಂಸಾಬ	11		1985	11 ತಿಂಗಳು	20	240	480	4080

		ಮುನ್ನಿಸಾ ಇಬ್ರಾಹಿಂ	6		1985	11 ತಿಂಗಳು	100	120	20400	3000
		ಶಾಂತಾಬಾಯಿ ವೀರಬಸಪ್ಪ	82		1985	11 ತಿಂಗಳು	40	480	7760	600
		ಖಾಖಾದರ ಹುಸೇನ ಸೈಯದ ಮಸ್ತಾನ	26		1985	11 ತಿಂಗಳು	20	240	2920	60
		ಪ್ರೆಸಿಡೆಂಟ್ ಅನ್ನಪೂರ್ಣೇಶ್ವರಿ ಶಿಶುವಿಹಾರ	29		1985	11 ತಿಂಗಳು	150	1800	36300	450

24, (94) ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀಳಗಿ ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ ಅಭಿವೃದ್ಧಿಯಲ್ಲಿರುವ 33 ಕೆ.ವಿ. ಹಾಗೂ 110 ಕೆ.ವಿ. ಸ್ಟೇಷನ್‌ಗಳು ಯಾವುವು;

ಆ) ಸದರಿ ಯೋಜನೆಗಳ ಅಂದಾಜು ವೆಚ್ಚ ಎಷ್ಟು (ಪ್ರತಿ ಯೋಜನೆಯ ಹಣದ ವಿವರ ಒದಗಿಸುವುದು);

ಇ) ಯಾವ ಯಾವ ಯೋಜನೆ ಯಾವ ಯಾವ ಹಂತದಲ್ಲಿದೆ;

ಈ) ಯಾವ ಯಾವ ಯೋಜನೆ ಯಾವಾಗ ಪೂರ್ಣಗೊಳಿಸ ಲಾಗುವುದು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಬೀಳಗಿ ಹಾಗೂ ಜಮಖಂಡಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಯಾವುದೇ ಹೊಸ 33 ಕೆ.ವಿ. ಅಥವಾ 110 ಕೆ.ವಿ. ವಿದ್ಯುತ್ ಉಪಕೇಂದ್ರಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುವುದಿಲ್ಲ. ಆದರೆ, ಜಮಖಂಡಿ ತಾಲ್ಲೂಕಿನ ಮುಂಡಗನೂರು ಮತ್ತು ಬನಹಟ್ಟಿಗಳಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಟೆಂಡರ್‌ಗಳನ್ನು ಫೆಬ್ರವರಿ 2006 ರಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಆಹ್ವಾನಿಸಲಾಗಿರುವ ಈ ಎರಡು ಯೋಜನೆಗಳ ಅಂದಾಜು ವೆಚ್ಚಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ವಿದ್ಯುತ್ ಉಪ–ಕೇಂದ್ರದ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
1.	ಮುಂಡಗನೂರು	757.01
2.	ಬನಹಟ್ಟಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವಿಕೆ.	609.38

ಬೀಳಗಿ ತಾಲ್ಲೂಕಿನ ಗಿರಿಸಾಗರ ಮತ್ತು ಜಮಖಂಡಿ ತಾಲ್ಲೂಕಿನ ಮದರಖಂಡಿ ಮತ್ತು ಬಿದರಿ ಗ್ರಾಮಗಳಲ್ಲಿ 33 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ ಬಗ್ಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಪರಿಶೀಲಿಸುತ್ತಿದೆ.